Regd No. M 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವದು ಪರಸ್ಥಳಕ್ಕೆ

ಸಂಪುಟ 19] ಮೈಸೂರು. ಬುಧವಾರ 11 ನೆ ಮಾರ್ಚಿ 1936 [ಸಂಚಿಕೆ 26

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಕುರ್ಚಿ ಇವೆಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿಕ್ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳನವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕುಲ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿ ಪರಿಕ್ಷಿಸಿ ನೋಡಬೇಕಾದ್ದು. ಟಿಕ್ 1 ಕ್ಕೆ 5 ಆಣೆ.

[ಪರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್ ಮಳವಳ್ಳಿ ಏಜೆಂಟರು: ಅಡ್ರೆಸ್

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ಮಿ| ಜಿ. ಎಸ್. ವೆಂಕಟರಾವ್ ದಿ ಮೈಸೂರು ಆಯುರ್ವೇದಿಕ್ ಫಾರ್ಮಸಿ

Manufg Chemists Druggists & Physician ೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

THE QUILON BANK

Established 1919

(Incorporated in Travancore,)

Head Office—QUILON

Member - Reserve Bank of India

FIXED DEPOSITS

are now accepted by the Bank on the following terms :—

6 months .. 3½ per cent
12 months .. 4½ per cent
24 months .. 5 per cent

For particulars please apply to the Head Office or Branches at:..

Alleppey, Alwaye, Bangalore C. & M. Stn, Bangalore City, Chirayinkil, Cochin, Coimbatore, Coonoor, Erode, Ernakulam, Hyderabad (Dn), Jaffna, Kayamkulam, Kottayam, Madras, Madura, Mount Road, Mysore, Nagarcoil, Quilon, Royapettah, Sherthallai, Secunderabad, Tenkasi, Tinnevelly Jn., Tinnevely Town, Trichinopoly, Trivandrum, Tuiticorin, Vellore

Analysis of Natioal Characteristics

Most Progressive—American.
Mos conservative—English.
Most mysterious—Chinese.
Most sporting—Indian.
Most musical—Hungarian.
Most religious—Irish.
Most courteous—Japanesse.
Most hospitable—Spanish.
Most romantic—Italian.
Most methodical—German.

So measures a Scotchman, the charactaristics of various nations.

(S. T)

ಮಾರುತಿಯ ಭಕ್ತಿ

———

೨ ಬ್ರಹ್ಮಲೋಕ

ದ್ವಾರಪಾಲಕನು—ಬುದ್ಧೀ! ದೊಡ್ಡ ಮಂಗ ಬಂದಿದೆ. ಬಸಬಸ ಗಟ್ಟುತ್ತಾ, ಬಾಗಲಗೆ ಅಡ್ಡವಾಗಿ ನಿಂತಿದೆ, ಹಿಂದಕ್ಕೆ ಸರಿಯದು. ಜಪವನ್ನು ಬಂದೆಯೇನು? ಮಾಡುತ್ತಿದೆ!

ಬ್ರಹ್ಮ—(ವಿಸ್ಮಯದೊಂದಿಗೆ) ಆ! ಏನು?

(ಹೊರಗೆ ಬಂದು)

ಬ್ರಹ್ಮ—ಮಾರುತೀ! ಮಾರುತೀ!! ಈಗ ಒಬ್ಬನೇ!

ಮಾರುತಿ—(ಮುಚ್ಚಿದ ಕಣ್ಣುಗಳನ್ನು ತೆರೆಯದೆ ಧ್ಯಾನದಲ್ಲಿ)

ರಾಮ ರಾಮ ರಾಮ ರಾಮಾ!

ರಾಮ ರಾಮ ರಾಮ ರಾಮಾ!!

ಬ್ರಹ್ಮ—(ಗಟ್ಟಿಯಾಗಿ ಶಬ್ದಮಾಡಿ) ಮಾರುತೀ!

ಮಾರುತಿ—(ಕಣ್ಣುಗಳನ್ನು ತೆರೆಯುತ್ತಾ) ಬಂದೆಯಾ ತಾತಾ! (ನಮಸ್ಕರಿಸಿ)—ಮೊದಲು ನನ್ನ ಕೆಲಸವನ್ನು ಮುಗಿಸಿ ಬೇರೊಂದು ಕೆಲಸಕ್ಕೆ ಹೋಗಬೇಕು.

ಬ್ರಹ್ಮ—ಬೇಗ ಹೇಳು. ಆಮೇಲೆ ಶ್ರೀರಾಮನ ಪಟ್ಟಾಭಿಷೇಕ!

ಮಾರುತಿ—ನಾನೂ ಅದಕ್ಕಾಗಿಯೇ ಆತುರತೆಯಲ್ಲಿದ್ದೇನೆ!

ಬ್ರಹ್ಮ—ಇನ್ನೇನು! ವಿವಾಹವು ಶಯಾರಾಗಿದೆ! ಹೋಗೋಣೆ ಬಾ!

ಮಾರುತಿ—ಕೃತ್ರಿಮನಿರ್ಮಿತಗಳು ನಿನಗೆ; ನನ್ನ ಸ್ವೇಚ್ಛಾ ವಿಹಾರಕ್ಕೆ "ರಾಮ ನಾಮ" ದಿವ್ಯ ವಿವಾನವಿರುವದೇಳು!

ಬ್ರಹ್ಮ—ಪತ್ತೆ?

ಮಾರುತಿ—ಅಂಜನೀಪುತ್ರನು ಇಂದು ಕೈ ಚಾಚಿರುವನು!

ಬ್ರಹ್ಮ—ಏನು ನಿನ್ನ ಮಾತು! ನನ್ನ ಉಪಕಾರವೇ ನಿನಗೆ?

ಮಾರುತಿ—ನೆಮ್ಮ ರಾಮನಿಗೆ ನಾನು ಕೊಡಬಲ್ಲ ಕಾಣಿಕೆಯನ್ನು ಅನುಗ್ರಹಿಸಬೇಕು.

ಬ್ರಹ್ಮ—ಸರ್ವಸ್ವವೂ ನಿನ್ನ ಅಧೀನ.

ಮಾರುತಿ—ನನಗೆ ತಿಳಿಯದು-ನೀನೇ ಕೊಡು. ಆದರೆ ಒಂದು ಮಾತು ಏನು ಕೊಟ್ಟರೂ ಸುಯೆ ರಾಮನಾನು ಸಧೆಯು ತುಂಬಿ ತುಳುಕ ತಿರಬೇಕು! ಅದು ವಿನಹಾಗಿಳ ಭುವನಗಳನ್ನೂ ಧಾರೆ ಎರೆದರೂ ನಾನು ಬಯಸುವದಿಲ್ಲ.

ಬ್ರಹ್ಮ—ಒಳ್ಳೇ ಕಷ್ಟವನ್ನೇ ತಂದಿಟ್ಟೆ. ಕಾಲಿಗೂ ಕೊರಳಿಗೂ ಬಂಧವನ್ನು ಹಾಕಿರಪ್ಪಾ. ಏನು ಮಾಡಲೂ ತೋಚುವದಿಲ್ಲ.

ಮಾರುತಿ—ಮಾತಿಗೆ ಸಮಯವಲ್ಲ ಇದು, ಕೆಲಸವಾಗಲಿ.

ಬ್ರಹ್ಮ—ನೆನಸಿದಾಗಲೇ ತಾತನ ಮದುವೆಯೇ! ನೀನೇ! ನಿನಗೆ ಈ ಪದವಿಯನ್ನು ಕೊಟ್ಟವನ್ನು ಅನ್ನಬೇಕು! ಹಣ್ಣೋ, ಕಾಯಿಯೋ? ಒಂದೇ ಮಾತು! ಹೇಳು.

ಬ್ರಹ್ಮ—(ಸ್ವಗತ) ಅಬ್ಬಾ! ವ್ಯವಹಾರವು ಬೆಳೆಯುತ್ತಿದೆ, ಧೋರಣೆಯು ಹೆಚ್ಚುತ್ತಿದೆ. ಆಗದ ಕೆಲಸವನ್ನು ಆಗಬೇಕೆನ್ನತ್ತಾನೆ ಇವನಂತೂ ಬಿಡುವ ಹಾಗಿಲ್ಲ ಅದಕ್ಕೇನು! ಮಾರುತಿಯಿಲ್ಲದೆ ಕೆಲಸವೇ ನಿಂತು ಹೋಗುವದಲ್ಲಾ! ತಪ್ಪಿಸಿಕೊಳ್ಳಲು ಮಾರ್ಗವೇ ಇಲ್ಲ!

(ಮಾರುತಿಯೊಂದಿಗೆ) ಮಾರುತೀ, ಇಷ್ಟು ನಿರ್ಬಂಧಪಡಿಸಿದರೆ ಹೇಗೆ! ಬ್ರಹ್ಮಾಸ್ತ್ರವನ್ನು ನೀನು ಕೇಳಿದಾಗಲೇ ಕೊಟ್ಟೆನಲ್ಲಾ! ವಯಸ್ಸಾದವನು ನಾನು. ಹೀಗೆ ಆತುರಪಡಿಸಿದರೆ ಹೇಗೆ?

ಮಾರುತಿ—ಏನಯ್ಯಾ! ಬಗಳ ಉಪಕಾರ ಮಾಡಿದವನಂತೆ ಹೇಳುತ್ತಿರ ಏ? ನಿನ್ನ ಅಸ್ತ್ರವನ್ನು ರಾಮಕಾರ್ಯಾರ್ಥವಾಗಿ ರಾಮದೂತನಿಗೆ ಕೊಟ್ಟು ಉದ್ಯೋಗಧರ್ಮವನ್ನು ನಿರ್ವಹಿಸಿಕೊಡೆ ಅಷ್ಟೇನೇ! ಈಗ ಕೈಚಾಚಿರುವದು ರಾಮ ದೂತನಲ್ಲ, ಮಾರುತಿ!

ಬ್ರಹ್ಮ—ಎಂತಹ ಮಾತು! ನೀನು—ಮಾಡಿದರೂ ನಾನು ಮಾಡಿದರೂ ರಾಮಸೇವೆಯೇ ಅಲ್ಲವೇ!

(ಒಳಕ್ಕೆ ಹೋಗಿ ಒಂದು)

ಇಗೋ! ಈ ಎರಡು ಬೀಜಗಳನ್ನು ನೆಟ್ಟಿದಲ್ಲಿ ಅವು ಮೊಳೆಯುವವು. ಇಷ್ಟೇ ಅಲ್ಲ. ನೋಡುತ್ತಿರುವಾಗಲೇ ಪುಷ್ಪಿಸುವದೂ ಫಲಿಸುವದೂ ಕೂಡ.

(ಕೈಯೊಳಗಿಡುತ್ತಾ)

ಇದು ರಾಮ ಫಲ! ಇದು ಸೀತಾ ಫಲ!! ಏನು? ಸಂತೋಷವಾಯಿತೆ!

ಮಾರುತಿ—(ಕೈಗೆ ತೆಗೆದುಕೊಂಡು ಕುಣಿಯುತ್ತಾ) ಜಯವಾಯ್ತು! ಜಯವಾಯ್ತು!! ನಿಜವಾಗಿಯೂ ಈಗ ನೀನು ಸೃಷ್ಟಿಕರ್ತನು. ಬಹಳ ಬುದ್ಧಿವಂತನಲ್ಲವೇ! ಎದುರಿನಲ್ಲಿ ಹೇಳಬಾರದು ಆತುರತೆಯನ್ನು ಮನ್ನಿಸಬೇಕು ತಾತಾ! ಹೋಗಿ ಬರುತ್ತೇನೆ!!

ರಾಮ ರಾಮ ರಾಮ ರಾಮಾ!

ರಾಮ ರಾಮ ರಾಮ ರಾಮಾ!!

(ಹಾಡುತ್ತಾ ಅದೃಶ್ಯನಾಗುವನು).

೩ ಅಯೋಧ್ಯೆ

ಪರಿವಾರದೊಂದಿಗೆ ಶ್ರೀ ರಾಮಚಂದ್ರಮೂರ್ತಿ.

ಶ್ರೀರಾಮ—ಶಮ್ಮಾ ಲಕ್ಷ್ಮಣಾ! ದರ್ಬಾರು ಇಷ್ಟು ಚೆಕ್ಕರಿಸಿದ್ದರೂ ಯಾರೂ ಇಲ್ಲದ ತೆಯೇ ಕಾಣಬರುತ್ತಿದೆ. ವಾರ್ತೆಯಿಲ್ಲದೆ. ಸರಿಯಾಗಿ ಸಮಯಕ್ಕೆ ತಪ್ಪಿಸಿಕೊಂಡ ನೋಡು!

ಲಕ್ಷ್ಮಣ—ಈಗ ಇಲ್ಲಿ ಕಂಡ ಬಂದ! ಏನು ಈ ಆಶ್ಚರ್ಯ!

ಸೀತೆ—ಮಾರುತಿಯಿಲ್ಲದೆ ಪಟ್ಟಾಭಿಷೇಕವೇ! ಅತನನ್ನು ಹುಡುಕಿಕೊಂಡು ಬರಬೇಕು.

ಲಕ್ಷ್ಮಣ—ಸುಮಂತ್ರಾ! ಎಲ್ಲರೂ ಬಂದಿರುವರೆಂದು ಹೇಳಿದಿ. ಇನ್ನೂ ವಿವಾನದ ಝೆಂಕಾರವು ಕೇಳಬರುತ್ತಿವೆ. ಏನೋ ನೋಡು!

(ನೌಕರನು ಒಂದು)

ಸ್ವಾಮಿಾ—ಬುದ್ಧೀ! ಬರುತ್ತಿದ್ದಾನೆ. ನಮ್ಮ ಮಾರುತಿ ಒರುತ್ತಿದ್ದಾನೆ. ಓಡುತ್ತಾ. ದೊಡ್ಡ ಬೆಟ್ಟವನ್ನು ಹೊತ್ತುಕೊಂಡು ಆಕಾಶಮಾರ್ಗದಲ್ಲಿ!

(ಆರಮನೆಯ ಹೊರಗೆ ಧ್ವನಿ)

ರಾಂ ರಾಂ ರಾಂ ರಾಂ!

ರಾಂ ರಾಂ ರಾಂ ರಾಂ!!

ಮಾರುತಿ—(ಪ್ರವೇಶಿಸಿ ಪಾದಾಕ್ರಾಂತನಾಗಿ) ರಾಮಚಂದ್ರಮೂರ್ತೀ! ಜೋಹಾರ್!!!

ಶ್ರೀರಾಮ—(ಹನುಮಂತನನ್ನು ಆಲಿಂಗನೆ ಮಾಡಿಕೊಂಡು) ಬಂದೆಯಪ್ಪಾ ನನ್ನ ತಂದೇ! ಈ ಆಯಾಸವೇನು, ಈ ಆತುರತೆಯೇನು? ಎಲ್ಲಿಗೆ ಹೋಗಿದ್ದೆ ಇಷ್ಟು ಹೊತ್ತು? ನೀನಿಲ್ಲದೆ ಸಭೆಯು ಹೇಗೋ ಇತ್ತು! ಅಂದವೇ ಇರಲಿಲ್ಲ. ಸೀತೆ ಇಲ್ಲದ ಪರ್ಣಕುಟೀರದಂತೆ! ಮೊದಲು ಆಯಾಸವನ್ನು ಪರಿಹರಿಸಿಕೋ!

ಮಾರುತಿ—ರಾಮದೂತನು ಎಂದೂ ಶ್ರಮವೆಂಬುದನ್ನರಿಯನು.

(ಫಲಗಳು ಕೆಲವನ್ನು ರಾಮನಿಗೆ ಕೊಟ್ಟು)

ಸ್ವಾಮಿಾ! ರಾಘವಾ! ಇವು ರಾಮಫಲಗಳು. ಕರುಣೆಯೊಂದಿಗೆ ಸ್ವೀಕರಿಸಬೇಕು!

ಕೆಲವನ್ನು ಸೀತಾದೇವಿಗೆ ಕೊಟ್ಟು, ತಾಯಿಾ! ಜಾನಕೀ! ಇವು ಸೀತಾ ಫಲಗಳು, ದಯವಿಟ್ಟು ಸ್ವೀಕರಿಸಬೇಕ!

ಶ್ರೀರಾಮನು—(ಆಶ್ಚರ್ಯದೊಡನೆ) ಏನು ಏನು! ಪುನಃ ಹೇಳು!

ಮಾರುತಿ—ಅಳುವ ಮಹಾಶ್ವಾಮಿಗೆ ಅರ್ಪಿಸಿಕೊಂಡವು ರಾಮ ಫಲಗಳು. ತಾಯಿಯವರಿಗೆ ಆಂಕಿತಮೊಡಲ್ಪಟ್ಟವು ಸೀತಾ ಫಲಗಳು.

ಶ್ರೀರಾಮ—(ಹನುಮಂತನನ್ನು ಪುನಃ ಗಾಢಾಲಿಂಗನವಾಡಿಕೊಂಡ) ಮಾರುತೀ! ಈ ಬಾಯಿಯಲ್ಲಿ ನನ್ನ ಆನಂದನನ್ನು ಹೊರಪಡಿಸಿಲಾರೆನು!

ಮಾರುತಿ—ಎಲ್ಲಾ ಶ್ರೀರಾಮಚರಣೆ!!!

ಸೀತೆ—(ಕಂಠದಲ್ಲಿದ್ದ ಮುತ್ತಿನ ಹಾರವನ್ನು ತೆಗೆದು ಮಾರುತಿಯ ಕೊರಳಲ್ಲಿ ಹಾಕುತ್ತಾ) ಮಾರುತೀ! ತಕ್ಕ ಕಾಣಿಕೆಯನ್ನು ತರಬಲ್ಲವನು ನೀನೊಬ್ಬನೇ ಆಗಿರುವಿ!

ಮಾರುತಿ—ತಾಯಿಾ! ಎಲ್ಲಾ ನಿನ್ನ ಪ್ರೇಮ!!

ಪಕ್ಕದಲ್ಲಿಯೇ ಕುಳಿತು ಹಾರವನ್ನು ಬಿಚ್ಚಿ ನೋಡುತ್ತಾ,

(ಕಲ್ಲುವೆ ಲೆ ಕಲ್ಲನ್ನಿಟ್ಟು)

ರಾವಣನಾನು ರಾಮನಾನು

ಶಕ್ತಿಮುಕ್ತಿಗಳನೀಯುವ ರಾಮನಾನು

ವ್ಯಥೆಗಳನ್ನು ಹರಿಸುವ ರಾಮನಾನು

ರಾಮನಾನು ರಾಮನಾನು

(ಬಂದು ಮುತ್ತನ್ನು ಒಡೆದು ಹಾಕುವನು)

ಅನ್ಯೃತವನ್ನು ವಿಾರಿದ ಅತಿಮಧುರನಾನು

ಅನಂತಾಬ್ಧಿಯಲ್ಲಿ ಮುಳುಗಿಸುವ ತಾರಕನಾನು

ವ್ಯಥೆಗಳನ್ನು ಹರಿಸುವ ರಾಮನಾನು

ರಾಮನಾನು ರಾಮನಾನು

(ಮತ್ತೊಂದು ಮುತ್ತನ್ನು ಒಡೆಯುವನು)

ಶ್ರೀ ರಾಮ—ತಮ್ಮಾ! ನೋಡು ಮಾರುತಿಯ ಭಕ್ತಿ!

[೭ ನೇ ಪುಟವನ್ನು ನೋಡಿ.]

ವೃತ್ತಾಂತಗಳು.

ಸಂ ಸಾ ರ ಟ್ಟಿಗಳ ಯುದ್ಧನಾವೆಗಳನ್ನು ಯಾರೂ ತಡೆಯಲಿಕ್ಕಾಗದೆಂದು ಫ್ರಾಂಕ್ಸ್ ಅಭಿಪ್ರಾಯಪಟ್ಟಿದ್ದರಿಂದ ಈ ವಿಷಯದಲ್ಲಿ ಇಂಗ್ಲೆಂಡಿಗೂ ಫ್ರಾಂಕ್ಸಿಗೂ ಚರ್ಚೆ ನಡೆಯುತ್ತಿದೆ.

ಇನ್ನುಮೇಲೆ ಒಂದು ಆಣೆ ಸ್ಟ್ಯಾಂಪನ್ನು ಹಚ್ಚಬೇಕಾದ ಕಾಗದದ ತೂಕವು ಅರ್ಧ ತೊಲೆಯಿಂದ ಒಂದು ತೊಲೆಗೆ ಹೆಚ್ಚಿಸಲ್ಪಡುವದೆಂದೂ, ಅದಕ್ಕೆ ಮೀರಿದ ಪ್ರತಿ ತೊಲೆಗೆ ಅರ್ಧಾಣೆ ಹೆಚ್ಚಾಗಿ ಕೊಡಬೇಕಾಗುವದೆಂದೂ ತಿಳಿಯಬಂದಿದೆ.

ಪಾಟ್ನಾದಲ್ಲಿ ನಡೆದ ಯಗ್ಜಿಬಿಶನ್‌ನಲ್ಲಿ ಪೋಸ್ಟಾಫೀಸು ಸ್ಟಾಲಿನಲ್ಲಿ ೫೦೦ ಪಿಕ್ಚರ್ ಪೋಸ್ಟ್ ಕಾರ್ಡುಗಳು ೩ ದಿವಸದೊಳಗೆ ಬಿಕರಿಯಾದವು

ತುಂಗಭದ್ರಾ ಪ್ರಾಜಕ್ಟಿನ ವಿಷಯದಲ್ಲಿ ಮೈಸೂರು, ಮದರಾಸು, ಮುಂಬೈ, ಹೈದರಾಬಾದು ಸರಕಾರಗಳಿಗಾಗಿರುವ ತಗಾದೆಯನ್ನು ತೀರ್ಮಾನಮಾಡಲು ಇಂಡಿಯಾ ಸರ್ಕಾರದವರು ಒಂದು ಕೋರ್ಟನ್ನು ನೇಮಿಸಲು ಯತ್ನಿಸುತ್ತಿದ್ದಾರೆ.

ಕಳೆದ ೧೦ ವರ್ಷಗಳಿಂದ ಉತ್ತರ ಫೆಫಿಕ್ ಸಾಗರದಲ್ಲಿ ಅನೇಕ ಹಡಗುಗಳು ಮಾಯವಾಗಿವೆ. ಇವುಗಳೆಲ್ಲಕ್ಕೂ ವೈರ್‌ಲೆಸ್ ಸಂಬಂಧವಿದ್ದರೂ ಹೀಗೆ ಆಗುವದಕ್ಕೆ ಎಲ್ಲರೂ ಆಶ್ಚರ್ಯಪಡುತ್ತಿದ್ದಾರೆ. ಅದರಲ್ಲಿದ್ದವರ ಒಬ್ಬರೂ ಕಾಣಬಂದಿರುವದಿಲ್ಲ ಮತ್ತು ಆ ಹಡಗುಗಳ ಒಂದು ತುಂಡೂ ಸಿಕ್ಕುವದಿಲ್ಲ. ಹೀಗೆ ಕಾಣದಿರುವ ಹಡಗುಗಳಲ್ಲಿ ಕೆಲವು ಇದರಡಿ ಕೊಡಲ್ಪಟ್ಟಿವೆ—

ಯಲ್ಕಟ್—೬೫೦ ಟನ್ ಟ್ರಾಲರ್ ಬೆ
ವಿಷ್ಯಾಟಿಕ್‌ಪ್ರಿಂಟ್—೬೫೦ ಟನ್ ಟ್ರಾಲರ್‌ಗಳು
ಯೋರ್ಕ್‌ಮಾರ್—೧೦೦ ಟನ್ ಟ್ರಾಲರ್‌ಗಳು

ಡಾ॥ ಆಕ್ಕಾಡ್ಸರವರು ಕೂನೂರಿನಲ್ಲಿ ದೇಹಪುಷ್ಟಿಗೆ ಸಂಬಂಧಿಸಿದ ಪದಾರ್ಥಗಳ ವಿಷಯದಲ್ಲಿ ಪರಿಶೋಧನೆಯನ್ನು ಮಾಡುತ್ತಿರುವರು. ಇವರ ಪರಿಶೋಧನೆಯು ಜನರ ಆರೋಗ್ಯದ ವಿಷಯದಲ್ಲಿ ಹೆಚ್ಚು ಉಪಯೋಗವಾಗಬಹುದು

ಅಮೇರಿಕದ ಮುಖ್ಯ ಪಟ್ಟಣವಾದ ನಾಷಿಂಗ್ಟನ್ ನಗರದಲ್ಲಿ ೬೦೦೦ ಮೋಟಾರು ಕಾರುಗಳೂ ೫೦೦ ಗಾಡಿಗಳೂ ಇವೆ ಅವುಗಳಲ್ಲಿ ೫೦೦ ಮೋಟಾರುಗಳ ಮತ್ತು ಗಾಡಿಗಳ ಡ್ರೈವರ್‌ಗಳು ಜಿ.ಎ, ಎಂ.ಎ ಗಳಲ್ಲಿ ತೇರ್ಗಡೆಯಾದವರು. ಇಷ್ಟು ವಿದ್ಯಾವಂತರಾದ ಡ್ರೈವರುಗಳು ಮತ್ತೆ ಯಾವ ಪಟ್ಟಣದಲ್ಲಿಯೂ ಇರುವದಿಲ್ಲ. ನಿಜವಾಗಿಯೂ ಇದು ಇತ್ತೀಚಿನ ಡ್ರೈವರುಗಳಲ್ಲಿ ರೋಡುಗಳಲ್ಲಿ ಸಂಭವಿಸುವ ಅನೇಕ ಅಪಾಯಗಳನ್ನು ತಪ್ಪುವವು ಈ ಕಾಲದಲ್ಲಿ ವೈಸ್‌ರಾಯಿನಲ್ಲಿ ಮೂಟೆ ಗಾಡಿಯನ್ನು ಸಂಚಾರಿಸುವಷ್ಟು ಜಿ.ಎ, ಎಂ.ಎ ವ್ಯಾಸಂಗಮಾಡಿದವರಲ್ಲಿ ಅನೇಕರು ಸಂಪಾದಿಸುತ್ತಿಲ್ಲ. ಆದುದರಿಂದ ಯಾವ ವ್ಯಕ್ತಿಯನ್ನೂ ಹೀನವೆಂದು ಭಾವಿಸದೆ ವೃತ್ತಿಕ್ಷೇತ್ರದಲ್ಲಿ ಪದ್ದು ಜೀವನವನ್ನು ನಡಿಸಿಕೊಳ್ಳುತ್ತ ಬರುವದು ಒಳ್ಳೆಯ ರಸ್ತೆ ಬಂಡಿಯವರಿಗೆ ಉತ್ತಮವಾಗಿರುತ್ತದೆ.

ಕೊರಡಾ ಏಟು

ಬೆಂಗಾಲಿನಲ್ಲಿ ಯುವಕರಾದ ಮಹಮ್ಮದೀಯರು ಹಿಂದೂ ಸ್ತ್ರೀಯರನ್ನು ಅವಮಾನಪಡಿಸುತ್ತಾ ಅವರನ್ನು ಕೆಡಿಸುತ್ತಿರುವರಾದದರಿಂದ ಕೋರ್ಟಿನಲ್ಲಿ ಕ್ರಿಮಿನಲ್ ದಾವಾಮಾಡಿ ಇವರನ್ನು ವಿಚಾರಣೆ ಮಾಡುವದು ಕಷ್ಟಸಾಧ್ಯವಾಗಿರುವದರಿಂದಲೂ ವಿಧಿಯಿಲ್ಲದೆ ಕಾನೆನ ಸಭೆಯಲ್ಲಿ ಒಂದು ಬಿಲ್ಲನ್ನು ಪ್ಯಾಸು ಮಾಡಿಸುವ ಸ್ಥಿತಿಯು ಏರ್ಪಟ್ಟಿತು. ಬಲಾತ್ಕಾರದಿಂದ ಯಾರಾಗಲಿ ಸ್ತ್ರೀಯನ್ನು ಕೆಡಿಸಿದಲ್ಲಿ ಅವರಿಗೆ ಶಿಕ್ಷೆಯನ್ನು ವಿಧಿಸುವದಲ್ಲಿ ಕೆಲವು ಕೊರಡಾ ಏಟುಗಳನ್ನು ಹೊಡಿಸಬಹುದೆಂಬ ಕಾನೂನನ್ನು ಮಾಡಲಿರುವರು ದುರ್ಮಾರ್ಗರಾದವರು ತಮ್ಮ ದುಷ್ಟ ವರ್ತನೆಯನ್ನು ಬಿಟ್ಟುಬಿಟ್ಟು ಕಾಲಕ್ಕೆ ಈ ಕೊರಡಾ ಏಟಿನ ಶಿಕ್ಷೆಯು ತೆಗೆದುಹಾಕಲ್ಪಡುವದು. ಈ ಭಯದಿಂದಲಾದರೂ ದುರ್ಮಾರ್ಗರು ತಮ್ಮ ದುಷ್ಟ ತನವನ್ನು ಬಿಟ್ಟು ಒಳ್ಳೇ ಸನ್ಮಾರ್ಗಿಗಳಾಗಲೆಂದು ನಾವು ಹಾರೈಸುತ್ತೇವೆ. ಸಜ್ಜನರಾದೊಡನೆಯೇ ಅವರಿಗೆ ಶಾಂತಿಯು ಪ್ರಾಪ್ತವಾಗಿ ಶಾಂತಿಯಿಂದ ಒಂಧವಿನೋಜನೆಯಾಗಿ ವಿಕ್ಕವರ ಬಂಧವಿನೋಜನೆಗೂ ಸಹಾಯಕರಾಗಲು ಆ ಮೂಲಕ ಅನುಕೂಲವಾಗುತ್ತದೆ.

Shiromani NARAYANACHARYA
Chowkambha, Benarese.

S.U.N. & CO.
BENARES CITY.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಆಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಕ್ಕೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರೆಗೆ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರೆಗೆ. ಸಣ್ಣ ರುದ್ರಾಕ್ಷೀ ಆವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದಲ್ಲಿ 3 ಇನಾಮುಗಳು: 1 ವಿಶ್ವೇಶ್ವರ ಪತ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ]

ಕಮಲಾನೆಹರುಗಳಿಗೆ

ನೆರೆ ಳಗೆ ರಾಜನೆಂದೆನಿಪ ಪೆ |
ನೆರಾಂತು, ನಾಡಿಗೊದನಿದ ಕೇಡ ‖
ದೂರ ಮಾಡುವ ಕಾರ್ಯದೊಳು ಬಾಳುವೆಯ ಬಲಿ
ಗೊಟ್ಟು |
ಮೆರೆವಾನಂದಭವನದಾನಂದ ‖
ಮೂರುತಿ ವರ ಮೋತೀಲಾಲ ನೆ |
ಹರುವಿನ ಸೊಸೆ, ನಾರೀರತ್ನ ಮಣಿಯುವೆಂ ನಿನಗೆ ‖೧‖

ಊರುರು ಹರಡಿಪ್ಪ ಹೆಸರಿರುವ |
ನಾರಾಯಣನ ತನುಜಾತಜ ‖
ನ ರಾಣಿ, ಸರಸತಿದೇವಿಯಾಶ್ರಯ ಪಡೆದು ಪರಿ ‖
ಪರೆಯಿಂ ಮೆರೆವ ತರುಣಿ ಭಾರತೇ |
ಯರ ಮುಂದಾಳು ಜವಹರಲಾಲ ನೆ |
ಹರುವಿನ ಕೈಪ್ಪಿಡಿದ ನಿನಗೆ ಮಣಿಯದವರಾರು ? ‖೨‖

ವನನಿತೆಯರ ಸಾಲಲ್ಲಿ ಮಿರ |
ಮಿರಸಿ ಮಿರುಗುವಾ ರತ್ನ ನೀನು. |
ನಾರಿಯರ ಮುಂದಾಳು, ಸತಿಯುಂತೆ ಶಾಶ್ವತಳು ‖
ಪಾರತಂತ್ರ್ಯಶೃಂಖಲೆಯು |
ಮುರಿಯುವ ಕಾರ್ಯವನೆ ಜವ |
ಹರಗೆ ಹೇಳುತ್ತ ಮಡಿದ ನಿನ್ನಂ ಮರೆವರೆಂತೂ ! ‖೩

[ಕಂಠೀರವ.]



ಸೂಚನೆ

ತಾ|| ೧೧—೩—೩೬; ಕಮಲಾನೆಹರೂ ರವರ ಮರಣದ ಬಗ್ಗೆ ಶೋಕಪ್ರದರ್ಶನದ ದಿನವಾಗಿರುವುದರಿಂದ, ನಿನ್ನೆ ದಿವಸದ ನಮ್ಮ ಪತ್ರಿಕೆಯನ್ನು ಪ್ರಕಟಿಸದೆ, ಈ ದಿವಸ, ಅಂದರೆ ತಾ|| ೧೨—೩—೩೬ ರಲ್ಲಿ ಪ್ರಕಟಿಸಿರುತ್ತೇವೆ—ಮ್ಯಾನೇಜರ್.

ಸತ್ಯವಾದಿ

ಪಬ್ಲಿಕ್ ರಸ್ತೆ

ರಷ್ಯಾ ದೇಶದಲ್ಲಿ ದಿನದಿನಕ್ಕೆ ಒದಲಾವಣೆಗಳಾಗುತ್ತಲಿವೆ. 18 ರಿಂದ 45 ರವರಗಿನ ವಯಸ್ಸಿನ ಆ ದೇಶದ ಪ್ರತಿ ಸ್ತ್ರೀಪುರುಷನೂ ವರ್ಷದಲ್ಲಿ 6 ದಿನಗಳು ರಸ್ತೆಗಳನ್ನು ಹಾಕುವ ಮತ್ತು ರಸ್ತೆಗಳನ್ನು ಸರಿಪಡಿಸುವ ಕೆಲಸಗಳನ್ನು ತಪ್ಪದೆ ಮಾಡಬೇಕೆಂಬ ಶಾಸನ ಮಾಡಿರುವರು. ಹಾಗೆ ಮಾಡಲಾಗದವರು ತಪ್ಪ್ರತಿಯಾಗಿ ಸ್ವಲ್ಪ ತೆರಿಗೆಯನ್ನು ತೆರಬೇಕಾಗುವುದು.

ಉತ್ತಮ ಸ್ಥಿತಿಗೆ ಬರುವ ದೇಶಗಳೆಲ್ಲವೂ ಅಂತಹ ಶಾಸನಗಳನ್ನು ಜಾರಿಗೆ ತಂದು ದೇಶವನ್ನು ಅಭಿವೃದ್ಧಿಗೆ ತರುತ್ತಿರುವವು. ನಮ್ಮ ದೇಶದಲ್ಲಿ ಎಲ್ಲಾ ಕೆಲಸಕ್ಕೂ ಸರ್ಕಾರವೇ ಹಣವನ್ನು ವ್ಯಯಮಾಡಬೇಕಾಗಿದೆ. ಜನಗಳ ಮೂಲಕ ತೆರಿಗೆಗೆ ಪ್ರತಿಯಾಗಿ ಕೆಲಸವನ್ನು ತೆಗೆದುಕೊಳ್ಳುವ ಸಾಂಪ್ರದಾಯವಿಲ್ಲ. ಈಗಿನ ಸ್ಥಿತಿಗೆ ಇದು ಸುಲಲಿತವಾದ ಪದ್ಧತಿಯೆಂದು ಕಂಡುಬಂದರೂ, ಒಡವರ ಬೀಡಾದ ನಮ್ಮ ಏಂದೂ ದೇಶಕ್ಕೆ ರಷ್ಯಾ ದೇಸದಂತೆ ತೆರಿಗೆಯನ್ನು ಕೆಲಸದ ರೂಪವಾಗಿ ತೆಗೆದುಕೊಳ್ಳುವ ಪದ್ಧತಿಯೇ ಉತ್ತಮವೆಂದು ಕೂಲಿಗಾರರ ಪಕ್ಷದವರು ಭಾವಿಸುವರು.

ವೈಸ್‌ಛಾನ್ಸೆಲರ್ ಪದವಿ

ನಮ್ಮ ಮೈಸೂರು ವಿಶ್ವವಿದ್ಯಾಲಯದ ವೈಸ್‌ಛಾನ್ಸೆಲರಾದ ಮಿ|| ಮೆಟ್ಕಾಪ್‌ರವರು ರಜಾ ತೆಗೆದುಕೊಂಡಿರುವುದರಿಂದ ಆ ಸ್ಥಾನಕ್ಕೆ ಸಂಸ್ಥಾನದ ವಿದ್ಯಾಭ್ಯಾಸದ ಮುಖ್ಯಾಧಿಕಾರಿಗಳಾದ ಮಾ|| ಎಸ್. ಎಸ್. ಸುಬ್ಬರಾಯರಿಗೆ ತಮ್ಮ ಹಾಲಿ ಕೆಲಸದ ಜೊತೆಗೆ ಈ ಪದವಿಯು ಕೊಡಲ್ಪಟ್ಟಿರುವುದು. ಅಂದರೆ, ಸಧ್ಯ ಸಂಸ್ಥಾನದ ಸಕಲ ವಿದ್ಯಾಭ್ಯಾಸಕ್ಕೂ ಮಾ|| ಸುಬ್ಬರಾಯರೇ ಮುಖ್ಯಾಧಿಕಾರಿಗಳಾದಂತಾಯಿತು. ಇದು ಒಹು ಶ್ಲಾಘನೀಯವಾದುದೇ ಸರಿ. ಇಂತಹ ಅತ್ಯುನ್ನತವಾದ ಜವಾಬ್ದಾರಿಯುಳ್ಳ ಪದವಿಗಳು ಇವರಿಗೆ ದೊರೆತಿರುವುದಕ್ಕಾಗಿ ಇವರನ್ನು ನಾವೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ ಮತ್ತು ಮೈಸೂರಿನವರೇ ಆದ ಇವರು ಇತರ ದೇಶೀಯರಿಗಿಂತ ದೇಶದ ಹಿತಸಾಧನೆಯ ಬಗ್ಗೆ ಹೆಚ್ಚು ಗಮನವೀಯುವುದರಲ್ಲಿ ಸಂದೇಹವಿಲ್ಲ. ಸಂಸ್ಥಾನದ ವಿದ್ಯಾಭ್ಯಾಸದ ಸ್ಥಿತಿಗತಿಗಳು ಮತ್ತು ಉತ್ತಮಗೊಳ್ಳುವುವೆಂದು ನಂಬಿ ನಿರೀಕ್ಷಿಸುತ್ತೇವೆ. ವಿದ್ಯಾಭ್ಯಾಸದ ವಿಚಾರದಲ್ಲಿ ತುಂಬಾ ಅನುಭವವುಳ್ಳ ಇವರ ಆಡಳಿತದಲ್ಲಿ ವಿಶ್ವವಿದ್ಯಾಲಯದ ಸ್ಥಿತಿಯು ಹೆಚ್ಚು ಉತ್ತಮಗೊಳ್ಳುವುದೆಂದು ಧಾರಾಳವಾಗಿ ಹೇಳಬಹುದು.

ವರ್ತಮಾನಗಳು

ನಿಜ-ಡ್ಸರ್ ಅರಮನೆಯಲ್ಲಿರುವ ಗಡಿಯಾರವು ೧೦೦ ವರ್ಷಗಳಿಂದ ನಡೆಯುತ್ತಲಿದೆ. ಅದರ ಗಂಟೆಯ ಶಬ್ದವು ೩ ಮೈಲು ದೂರದವರೆಗೂ ಕೇಳಿಸುವುದು.

ಪಶ್ಚಿವಿದ್ಯಾಲಯಗಳ ಪರೀಕ್ಷೆಗಳಲ್ಲಿ ಸಂಗೀತ ಪರೀಕ್ಷೆಯನ್ನು ಕೂಡ ಸೇರಿಸಿದಲ್ಲಿ ಆ ಉತ್ತಮ ವಿದ್ಯೆಗೆ ಬಹಳ ಪ್ರೋತ್ಸಾಹ ಕೊಟ್ಟಂತಾಗುವದೆಂದು ಸಂಗೀತ ಶಾಸ್ತ್ರಜ್ಞರು ಅಭಿಪ್ರಾಯಪಡುವರು.

ಬಾರ್ಡೋಲಿ ಸತ್ಯಾಗ್ರಹದ ಫಲವಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಸುಮಾರು ಮೂವತ್ತು ಕುಟುಂಬಗಳು ಬ್ರಿಟಿಷ್ ರಾಜ್ಯವನ್ನು ಬಿಟ್ಟು ಸುಮಾರು ಮೂವತ್ತು ಮೈಲು ದೂರವಿರುವ ಬಾನ್ಸ್‌ಪೆ ಸ್ಥಂಸ್ಥಾನಕ್ಕೆ ಹೊರಟಿವೆ.

ದಿವಂಗತ ಕಿಂಗ್ ಜಾರ್ಜರ ನಿಧನದ ಖರ್ಚಿಗಾಗಿ ೫೫ ಸಾವಿರ ಪವನು ಈಸಲದ ಬ್ರಿಟನ್ನಿನ ಬಡ್ಜೆಟ್ಟಿನಲ್ಲಿ ಸೇರಿಸಲಾಗಿದೆ. ನಿಧನವೇಳೆಗೆ ಬಂದ ಅತಿಥಿಗಳನ್ನು ಸತ್ಕರಿಸುವುದಕ್ಕೆ ೭ ಸಾವಿರ ಪವನು ವೆಚ್ಚವಾಯಿತೆಂದು ತಿಳಿಯುಬಂದಿದೆ.

ಪೊಲೀಸು ಇಲಾಖೆಯಲ್ಲಿ ಲಂಚದ ಉಪದ್ರವಿದೆಯೆಂದು ಸರ್ ಹೆನ್ರಿ ಕ್ಯೆಕ್ ಸಾಹೇಬರು ಅಸಂಬ್ಲಿಯಲ್ಲಿ ಡಾ|| ಭಗವಾನ್‌ದಾಸರ ಪ್ರಶ್ನೆಗೆ ಉತ್ತರ ಕೊಟ್ಟರು. ಅದರ ಉಪದ್ರವನ್ನು ಸರ್ಕಾರದವರು ಸಂಪೂರ್ಣ ನಾಶಮಾಡಲು ಅಸಮರ್ಥರೆಂದೂ, ಅದು ನಾಶವಾಗಬೇಕಾದರೆ ಜನರು ಸಹಕರಿಸಬೇಕೆಂದೂ ತಿಳಿಸಿದರು.

ಮಹಾತ್ಮ ಗಾಂಧಿಯವರು ಮಾರ್ಚಿ ತಾ|| ೧೫ ಕ್ಕೆ ಲಖನೌದಲ್ಲಿ ಅಖಿಲ ಭಾರತದ ಖಾದಿ ಮತ್ತು ಗ್ರಾಮೋದ್ಯೋಗಗಳ ಪ್ರದರ್ಶನವನ್ನು ಅನಾವರಣ ಮಾಡುವರು. ಹಾಗೆಯೇ ಸಂಯುಕ್ತ ಪ್ರಾಂತ್ಯದಲ್ಲಿ ಖಾದಿಯ ಪ್ರಚಾರವನ್ನು ಹೆಚ್ಚಿಸಲು ಎರಡು ವಾರದ ವರೆಗೆ ಪಂಡಿತ ಜವಹರಲಾಲ್‌ರ ಸಂಗಡ ಸಂಚಾರ ಮಾಡುವರೆಂದೂ ತಿಳಿಯಲಾಗಿದೆ

ಮದ್ರಾಸು ಸರ್ಕಾರದ ಪ್ರಮುಖ ಮಂತ್ರಿಗಳಾಗಿರುವ ಬೊಬ್ಬಿಳ್ಳಿ ಮಹಾರಾಜರವರ ಪತ್ನಿಯರವರಿಗೆ ಆರೋಗ್ಯ ಚೆನ್ನಾಗಿಲ್ಲವೆಂದೂ ಅವರಿಗೆ ಯೂರೋಪಿನ ಪ್ರವಾಸವು ಅವಶ್ಯಕವೆಂದೂ, ಡಾಕ್ಟರವರು ಸಲಹೆ ಕೊಟ್ಟಿರುವರೆಂದೂ, ಇದಕ್ಕಾಗಿ ರಾಜರು ಕೆಲಕಾಲ ರಜಾ ಪಡೆದು ಏಪ್ರಿಲ್ ತಿಂಗಳಲ್ಲಿ ಪ್ರಯಾಣಮಾಡುವರೆಂದೂ ತಿಳಿಯಬಂದಿದೆ.

ಎಲ್ಲೆಲ್ಲೂ ಆತ್ಮಹತ್ಯೆ ! ಪ್ರತಿಯೊಬ್ಬರೂ ಉಪವಾಸದಿಂದ ಸಾಯುತ್ತಿದ್ದಾರೆ !!

ಇದಕ್ಕೆ ಕಾರಣ ಮಿಲ್ಲಿನ ಅಕ್ಕಿಯೇ ! ಇದರಿಂದಾಗುತ್ತಿರುವ ಆತ್ಮಹತ್ಯೆಯು ದಿನ ದಿನಕ್ಕೂ ಕ್ರಮೇಣ ಕೊಂಚ ಕೊಂಚವಾಗಿ ಅಗತಕ್ಕದ್ದು. ನಮ್ಮ ಕಣ್ಣಿಗೆ ಬೀಳುವುದಿಲ್ಲ. ಆದರೂ ಮಿಲ್ಲಿನ ಅಕ್ಕಿಯು ನಿಜವಾಗಿಯೂ ನಮ್ಮ ಪ್ರಾಣವನ್ನೇ ಹೀರುತ್ತಿದೆ. ಅಕ್ಕಿಯ ಮೇಲಿರುವ ತೌಡು ಮುಕ್ಕು ಹೊಟ್ಟು ಇವುಗಳಲ್ಲಿ ನಮ್ಮ ಶರೀರಕ್ಕೆ ಅತ್ಯಾವಶ್ಯಕವಾದ ಎಟಮಿನ್ ಆಹಾರ ಸಾಮಗ್ರಿಗಳಿವೆ. ಇವುಗಳನ್ನು ಮಿಲ್ಲಿನಲ್ಲಿ ನಾಶಮಾಡಿ, ಬರೀ ಜೀವಶೂನ್ಯವಾದ ಅಕ್ಕಿಯನ್ನು ಕೊಡುತ್ತಾರೆ. ಇದಕ್ಕೆ ಪಾಲಿಷ್ ಬೇರೆ. ಈ ನಿಸ್ಸಾರವಾದ ಅಕ್ಕಿಯನ್ನು ತಂದು ಮನೆಯಲ್ಲಿ ಬೇಯಿಸಿ, ಗಂಜಿಮುನ್ನು ಸುರಿದು, ಉಳಿದ ಶೇಷ ಬರೀ ಸಿಪ್ಪೆಯಂತಿರುವ ಅನ್ನವನ್ನು ತಿನ್ನುತ್ತೇವೆ. ಇದರಿಂದ ದೇಹ ಪೋಷಣೆಯಾಗುವುದಿಲ್ಲ. ನಮ್ಮಲ್ಲಿರುವ ಜೀವಕಣಗಳು (ಸೆಲ್ಸ್) ಸರಿಯಾದ ಆಹಾರ ಪೋಷಣೆಯಿಲ್ಲದೆ ದಿನ ದಿನಕ್ಕೆ ಕ್ಷೀಣವಾಗುತ್ತಾ ಇವೆ ಇದು ದಿನ ದಿನವೂ ಸ್ವಲ್ಪ ಸ್ವಲ್ಪವಾಗಿ ಆಗುವುದರಿಂದ ನಮಗೆ ತಿಳಿಯುವುದಿಲ್ಲ. ಮಿಲ್ಲಿನ ಅಕ್ಕಿಯಿಂದ ನಮ್ಮ ಜೀವಮಾನಗಳೇ ಕಡಿಮೆಯಾಗುತ್ತಿವೆ. ಸಾಧಾರಣವಾಗಿ ಅರವತ್ತು ವರುಷಗಳವರೆಗೂ ಜೀವಿಸುವವನು ಮಿಲ್ಲಿನ ಅಕ್ಕಿಯನ್ನು ತಿನ್ನುವುದರಿಂದ ಐವತ್ತು ಅಥವಾ ನಲವತ್ತು ವರುಷಕ್ಕೇ ಸಾಯುತ್ತಾನೆ ಈ ಸಾರ್ವಜನಿಕವಾದ ಆತ್ಮಹತ್ಯೆಯನ್ನು ನಿಲ್ಲಿಸಬೇಕಾದರೇನು ಮಾಡಬೇಕು ? ಕೊಟ್ಟಣದ ಅಕ್ಕಿಯನ್ನು ಉಯೋಗಿಸಬೇಕು, ತೌಡಿರುವ ಅಕ್ಕಿಯನ್ನು ಉಪಯೋಗಿಸಬೇಕು. ಆರೋಗ್ಯ ಇಲಾಖೆಯವರು ಈ ವಿಚಾರದಲ್ಲಿ ಜನಸಾಮಾನ್ಯಕ್ಕೆ ತಿಳುವಳಿಕೆಯನ್ನು ಕೊಡಬೇಕು. ಸುಮ್ಮನೆ ವಿದ್ರಿಸುತ್ತಿದ್ದರೆ ಆಗುವುದಿಲ್ಲ. ಪ್ರತಿಯೊಬ್ಬರೂ ಕೊಟ್ಟಣದ ಅಕ್ಕಿಯನ್ನೇ ಉಪಯೋಗಿಸುತ್ತೇನೆಂದು ಪ್ರತಿಜ್ಞೆಮಾಡಿಕೊಳ್ಳಬೇಕು. ಆಗಲೇ ದೇವರು ನಮಗೆ ಕೊಟ್ಟಿರುವ ಪೂರ್ಣಾಯುಸ್ಸಿನವರೆಗೂ ಜೀವಿಸುವೆವು.

ಮಿರ್ಜಾಪುರದಿಂದ ಸುಮಾರು ಮೂರು ಮೈಲಿ ದೂರದಲ್ಲಿರುವ ಗಾಮದಲ್ಲಿ ಬಾನರ್ಜಿ ಎಂಬವರ ಮನೆಯಲ್ಲಿಯ ಬೀಜಿನ ಮಂದಿಂದ ದಿನಂಪ್ರತಿ ೧೧ ಶೇರು ಮಧುರವಾದ ಜೇನುತುಪ್ಪದಂತಹ ರಸವು ಸುರಿಯುತ್ತಿದೆ.

ಮನುಷ್ಯನ ತೂಕವು ರಾತ್ರಿ ಮಲಗುವ ಕಾಲಕ್ಕೆ ಇರುವದಕ್ಕಿಂತ ಸುಮಾರು ಒಂದು ಪೌಂಡ ತೂಕವು ಬೆಳಿಗ್ಗೆ ಎಳುವಹೊತ್ತಿಗೆ ಕಡಿಮೆಯಾಗಿರುತ್ತದೆ. ಆದರೆ ಆ ತೂಕವು ಪುನಃ ಮಧ್ಯಾಹ್ನದ ಹೊತ್ತಿಗೆ ಇರುತ್ತದೆ.

ಫರಂಗಿಹಣ್ಣಿನಲ್ಲಿ ಎ. ಸಿ ಮತ್ತು ಡಿ. ವಿಟಮಿನ್‌ಗಳು ಅಧಿಕವಾಗಿವೆಯಾದುದರಿಂದ ದೇಹಕ್ಕೆ ಬಹಳ ಮುಖ್ಯವಾದ ಫಲವು. ಆದರೆ ಹೆಚ್ಚಾಗಿ ತಿಂದಲ್ಲಿ ಉಷ್ಣವಾಗುವದಾದುದರಿಂದ ಮಿತವಾಗಿ ಉಪಯೋಗಿಸಬಕ್ಕದ್ದು. ಇದರ ಕಾಯಿಯಲ್ಲಿ ಕ್ಷಯರೋಗನಿವಾರಣ ಶಕ್ತಿಯಿದೆ ಮತ್ತು ಇದು ಜ್ವರದ ಗಡ್ಡೆಯನ್ನು ಕರಗಿಸುವುದು.

ಜೀವಶಾಸ್ತ್ರದ ಕ್ರಮಗಳು ಸತ್ತವರೊಡನೆ ಮಾತನಾಡುವ ಮಾರ್ಗಗಳು

(ಲೇಖಕರು—" ಕೆ. " ಯವರು)

[ಸಕಲ ಹಕ್ಕುಗಳನ್ನು ಲೇಖಕರು ಹೊಂದಿರುತ್ತಾರೆ]

ಮೇಜು ಶಬ್ದಕ್ರಮ ಮತ್ತು ಮೇಜು ಚಲನ ಕ್ರಮಗಳೂ ಮುಂದೆ ಹೇಳಲ್ಪಡುವ ಇನ್ನೂ ವಿಶೇಷತರವಾದ ಕ್ರಮಗಳೂ ಸಿದ್ಧಿಸಬೇಕಾದರೆ ಕೆಲಂಜಕಾಲ ಅಭ್ಯಾಸವು ಅತ್ಯಾವಶ್ಯಕ. ಇದಲ್ಲದೆ ಈ ಕ್ರಮಗಳನ್ನು ಅನುಸರಿಸುವಾಗ, ಸೂಕ್ಷ್ಮಶಕ್ತಿಯುಳ್ಳವರನ್ನೂ ಸೇರಿಸಿಕೊಳ್ಳುವುದು ವಾಡಿಕೆಯಾಗಿದೆ. ಸೂಕ್ಷ್ಮಶಕ್ತಿಯುಳ್ಳವರಿಗೆ, ಮಿಡಿಯಮ್ಸ್ ಎಂದು ಹೆಸರು. ಇವರು ಭಾಗವಹಿಸಿ ಈ ಕ್ರಮಗಳನ್ನು ಅನುಸರಿಸಿದುದೇ ಆದರೆ ತಕ್ಷಣವೇ ಜೀವಸಂಭಾಷಣವನ್ನು ಅತ್ಯಂತ ಸುಲಭವಾಗಿ ನಡೆಸಬಹುದು. ಸೂಕ್ಷ್ಮಶಕ್ತಿಯು ಪ್ರತಿಯೊಬ್ಬರಿಗೂ ಸಹಜವಾಗಿ ಇದ್ದೇ ಇರುವುದು. ಆದರೆ ನಮಗಿರುವ ಸೂಕ್ಷ್ಮಶಕ್ತಿಯು, ಜೀವಸಂಭಾಷಣೆಗೆ ಬೇಕಾಗುವ ಪ್ರಮಾಣದಲ್ಲಿಲ್ಲ. ಇದನ್ನು ಅಭ್ಯಾಸದಿಂದ ವೃದ್ಧಿಮಾಡಿಕೊಳ್ಳಬೇಕು. ಆದರೆ ಕೆಲವರಿಗೆ ದೈವಾನುಗ್ರಹದಿಂದ ಸಹಜವಾಗಿಯೇ ಸೂಕ್ಷ್ಮಶಕ್ತಿಯು ವಿಶೇಷವಾಗಿರುವುದು. ಇವರು ಈ ಕ್ರಮಗಳನ್ನು ಅನುಸರಿಸುವಾಗ ಭಾಗವಹಿಸುವಂತೆ ಮಾಡಬೇಕು. ನಮ್ಮಲ್ಲಿ ಅನೇಕರು ವಿಶೇಷ ಸೂಕ್ಷ್ಮಶಕ್ತಿಯುಳ್ಳವರಾಗಿರಬಹುದು. ಮಿಡಿಯಮ್ಸ್ ಆಗಿರ ಬಹುದು ಆದರೆ ಜೀವಸಂಭಾಷಣೆ ನಡೆಸಿದ ಹೊರತು ಈ ಶಕ್ತಿಯು ಬಹಿರಂಗವಾಗಿ ಪ್ರಕಟವಾಗುವುದಿಲ್ಲ. ಈ ಸೂಕ್ಷ್ಮಶಕ್ತಿಯು ಸ್ತ್ರೀಯರಲ್ಲಿ ಸಹಜವಾಗಿ ಹೆಚ್ಚು ಪ್ರಮಾಣದಲ್ಲಿರುವುದೆಂದು ಅನೇಕ ಸುಸ್ಪಷ್ಟಸಿದ್ಧ ಶಾಸ್ತ್ರಜ್ಞರು ಸಿದ್ಧಾಂತಪಡಿಸಿರುತ್ತಾರೆ. ಆದುದರಿಂದ ಈ ವಿಶೇಷತರಗಳಾದ ಮಾರ್ಗಗಳನ್ನು ಅನುಸರಿಸುವಾಗ ಹೆಂಗಸರೂ ಭಾಗವಹಿಸುವಂತೆ ಮಾಡುವುದು ಮೇಲು. ಸರ್ವಸಾಮಾನ್ಯವಾಗಿ ಒಂದು ದೊಡ್ಡ ಸಂಸಾರದಲ್ಲಿ ಒಬ್ಬರಾದರೂ ವಿಶೇಷ ಸೂಕ್ಷ್ಮಶಕ್ತಿಯುಳ್ಳವರಾಗಿರುತ್ತಾರೆಂದು ಹೇಳಬಹುದು. ಈ ಕ್ರಮಗಳಲ್ಲಿ ಮನೆಯವರೆಲ್ಲರೂ (ಚಿಕ್ಕ ಮಕ್ಕಳು ವಿನಹ) ಭಾಗವಹಿಸಿದ್ದರೆ, ಆಗ ಸೂಕ್ಷ್ಮಶಕ್ತಿಯು ಹೊರಬೀಳುವುದು. ಸಂಭಾಷಣಾ ಮಾರ್ಗಗಳನ್ನು ಪ್ರಾರಂಭಿಸಿದ ತಕ್ಷಣವೇ ಮೇಲೆ ಹೇಳಲ್ಪಟ್ಟ ಸಂಭವಗಳುಂಟಾದರೆ, ಸಂಭಾಷಣೆ ಮಾಡುವವರಲ್ಲಿ ಮಿಡಿಯಮ್ಸ್ ಒಬ್ಬರಿದ್ದಾರೆಂದು ತಿಳಿಯಬೇಕು. ಅಂಥವರು ಎದ್ದು ಹೋದರೆ, ಜೀವಸಂಭಾಷಣೆಯೂ ನಿಂತುಹೋಗುವುದು. ಒಬ್ಬೊಬ್ಬರಾಗಿ ಎದ್ದುಹೋಗಿ ಕೊನೆಗೆ, ಮಿಡಿಯಂ ಅಂದರೆ ವಿಶೇಷ ಸೂಕ್ಷ್ಮಶಕ್ತಿಯುಳ್ಳವರಾರೆಂದು ಪತ್ತೆಮಾಡಬಹುದು. ಅಂಥವರು ಎಲ್ಲಿ ಯಾವ ಸಂಭಾಷಣಾಕ್ರಮವನ್ನು ನಡೆಸಿದರೂ ಬಹು ಬೇಗನೆ ಸತ್ತವರು ನಮ್ಮೊಡನೆ ಸಂಭಾಷಿಸುವರು. ಆದುದರಿಂದ ಅಂಥವರನ್ನು ಪ್ರತಿಸಾರಿಯೂ ಭಾಗವಹಿಸುವಂತೆ ಮಾಡಬೇಕು. ಹೊಸದಾಗಿ ಈ ಜೀವಶಾಸ್ತ್ರ ತತ್ವಗಳನ್ನು ಪರೀಕ್ಷಿಸಬೇಕೆಂದು ಬರುವವರಿಗೆ ಅತ್ಯಾಶ್ಚರ್ಯವನ್ನು ಮಿಡಿಯಮ್ಸ್ ಉಂಟುಮಾಡುತ್ತಾರೆ. ಈಗ ಮುಂದೆ ಹೇಳಲ್ಪಡುವ ಮಾರ್ಗವು, ವಿಶೇಷ ಸೂಕ್ಷ್ಮಶಕ್ತಿಯುಳ್ಳವರು ಭಾಗವಹಿಸಿದರೆ ಸಿದ್ಧಿಸುತ್ತದೆ, ಇಲ್ಲದಿದ್ದರೆ ಇಲ್ಲ. ಇಂಥಹ ವಿಶೇಷ ಸೂಕ್ಷ್ಮಶಕ್ತಿಯುಳ್ಳವರ, ವಿಚಾರದಲ್ಲಿ ವಾಚಕರು ಒಂದು ಅಂಶವನ್ನು ನೆನಪಿನಲ್ಲಿಟ್ಟಿರಬೇಕು. ಅದೇನೆಂದರೆ, ಸೂಕ್ಷ್ಮಶಕ್ತಿಯುಳ್ಳವರು ಜೀವಸಂಭಾಷಣೆ ನಡೆಸುವಾಗ ಒಂದು ತೆರಹ ಉನ್ಮಾದಸ್ಥಿತಿಯಲ್ಲಿರುವರು. ಬಹು ಸೋತುಹೋದವರಂತೆ ಮೂರ್ಛಾವಸ್ಥೆಯಲ್ಲಿರುವರು. ಇದಕ್ಕೆ ನಾವು ಹೆದರಬಾರದು. ಘಾಬರಿಪಡಬಾರದು. ಹೀಗಾಗುವುದಕ್ಕೆ ಕಾರಣವೇನೆಂದರೆ, ಸಂಭಾಷಣಾಕಾಲದಲ್ಲಿ, ಸತ್ತವರು, ನಮ್ಮಲ್ಲಿರುವ ಸೂಕ್ಷ್ಮಶಕ್ತಿಯನ್ನು ಹೀರಿಕೊಂಡು ಅದರ ಬಲದಿಂದ ಸಂಭಾಷಣೆಯನ್ನು ನಡೆಸುವರು. ಸಂಭಾಷಣೆಯಾಗುತ್ತಲೇ ನಮ್ಮ ನಮ್ಮ ಸೂಕ್ಷ್ಮಶಕ್ತಿಗಳು ಯಥಾಪ್ರಕಾರವಾಗಿ ನಮ್ಮನ್ನು ಬಂದು ಸೇರುತ್ತವೆ. ಜೀವಸಂಭಾಷಣೆಗಳಲ್ಲಿ, ~~ಸೂಕ್ಷ್ಮಶಕ್ತಿಯುಳ್ಳ~~ ಮಿಡಿಯಮ್ಸ್‌ಗಳು ಭಾಗವಹಿಸಿದ್ದೇ ಆದರೆ ಆಗ ಅವರ ಶಕ್ತಿಯೆಲ್ಲವೂ ಸಂಭಾಷಣೆಗೋಸ್ಕರವಾಗಿ ಉಪಯೋಗಿಸಲ್ಪಡುವುದು. ಸೂಕ್ಷ್ಮಶಕ್ತಿಯೇ ನಮಗೂ, ಸತ್ತವರಿಗೂ ಸಂಭಾಷಣೆಯ ಸಾಧನವೆಂಬುದು, ಜೀವಶಾಸ್ತ್ರದ ಮುಖ್ಯ ತತ್ವಗಳಲ್ಲಿ ಒಂದಾಗಿದೆ. ಈ ಸೂಕ್ಷ್ಮಶಕ್ತಿ ಇಲ್ಲದಿದ್ದರೆ ಜೀವಸಂಭಾಷಣೆಯು ಸಾಧ್ಯವಿಲ್ಲ. ಮುಂದೆ ಹೇಳಲ್ಪಡುವ ಮಾರ್ಗದಲ್ಲಿ ನಾವು ಸತ್ತವರೊಡನೆ ಖುದ್ದಾಗಿ ಮಾತನಾಡಬಹುದು. ನಾವು ಕೇಳುವ ಪ್ರಶ್ನೆಗಳಿಗೆ, ಸತ್ತವರು ಮತ್ತಾತಿಸಲ್ಲೇ ಉತ್ತರ ಕೊಡುತ್ತಾರೆ. ಅವರ ಉತ್ತರಗಳನ್ನು ನಾವು ನಮ್ಮ ಸ್ಥೂಲಕಿವಿಯಿಂದ ಕೇಳಬಹುದಾಗಿದೆ. ಸತ್ತವರು ಜೀವಿಸುತ್ತಿದ್ದಾಗ ಮಾತನಾಡುತ್ತಿದ್ದ ಧ್ವನಿಯನ್ನು ನಾವು ಕೇಳಬಹುದು ಪ್ರಿಯಬಂಧು ಮರಣದಿಂದ ಮರುಗುತ್ತಿರುವವರಿಗೆ ಇದಕ್ಕಿಂತಲೂ ಸಮಾಧಾನಕರವಾದುದು ಯಾವ್ವದಿರುವುದು? ಈ ಮಾರ್ಗದ ಕ್ರಮವೇನೆಂದರೆ— ಮೊದಲೇ ಜೀವಸಂಭಾಷಣೆಗೋಸ್ಕರ ಸಿದ್ಧಮಾಡಲ್ಪಟ್ಟಿರುವ ಕೊಠಡಿಯಲ್ಲಿ ಒಂದು ದೊಡ್ಡ ಮೇಜವನ್ನೂ ಸುತ್ತಲೂ ಕುರ್ಚಿಗಳನ್ನೂ ಇಡಬೇಕು ಮತ್ತು ಚಾವಣಿಯಿಂದ ಕೆಲವು ತುತ್ತೂರಿಗಳನ್ನು ನೇತಾಡುವಂತೆ ಕಟ್ಟಬೇಕು. ಈ ತುತ್ತೂರಿಗಳನ್ನು ಕಾಗದದಲ್ಲಿಯಾಗಲೀ ತಗಡಿನಲ್ಲಾಗಲೀ ಮಾಡಬಹುದು. ಅವು ಸಕ್ಕರೆ ಪೊಟ್ಟಣದಂತೆ, ಒಂದುಕಡೆ ಸಣ್ಣದಾಗಿಯೂ ಮತ್ತೊಂದುಕಡೆ ದೊಡ್ಡದಾಗಿಯೂ ಇರಬೇಕು. ಇವುಗಳ ಮುಖ್ಯ ಉದ್ದೇಶವೇನೆಂದರೆ— ಸತ್ತವರು ಈ ತುತ್ತೂರಿಗಳನ್ನು ಉಪಯೋಗಿಸಿ ಮಾತನಾಡಿದರೆ, ಅವರ ಧ್ವನಿಯನ್ನು ಕೇಳುವಷ್ಟು ಹೆಚ್ಚುಮಾಡುತ್ತವೆ. ಸೂಕ್ಷ್ಮಶಕ್ತಿಯಿಂದ ಸತ್ತವರು ತಮ್ಮ ಸೂಕ್ಷ್ಮಶರೀರಕವಾದ ಬಾಯಿಯಿಂದ ಮಾತನಾಡುತ್ತಾರೆ. ಈ ಮಾತುಗಳು ಬಹಳ ಸಣ್ಣ ಧ್ವನಿಯುಳ್ಳವುಗಳಾಗಿ, ನಮ್ಮ ಕಿವಿಗೆ ಕೇಳುವಷ್ಟು ಘಟ್ಟಿಯಾಗಿರುವುದಿಲ್ಲ. ಆದರೆ ಈ ತುತ್ತೂರಿಗಳು ಆ ಧ್ವನಿಯನ್ನು ಹೆಚ್ಚಿಸಿ ಅವರ ಮಾತುಗಳು ನಮಗೆ ಸ್ಪಷ್ಟವಾಗಿ ಕೇಳುವಂತೆ ಮಾಡುತ್ತವೆ. ಇಂತಹ ಮೂರೋ ಅಥವಾ ನಾಲ್ಕೋ ತುತ್ತೂರಿಗಳನ್ನು ಚಾವಣಿಯಿಂದ ನೇತುಹಾಕಿದರೆ, ಸತ್ತವರು ತಮಗೆ ಸರಿಹೋಗುವ ತುತ್ತೂರಿಯನ್ನು ಆರಿಸಿಕೊಂಡು ಉಪಯೋಗಿಸಲು ಅನುಕೂಲವಾಗುವುದು. ಈ ರೀತಿಯಲ್ಲಿ ಸಿದ್ಧಮಾಡಲ್ಪಟ್ಟಿರುವ ಕೊಠಡಿಯನ್ನು ಜೀವಸಂಭಾಷಣೆಯಲ್ಲಿ ಭಾಗವಹಿಸುವವರೆಲ್ಲರೂ ಪ್ರವೇಶಿಸಿ, ಮೇಜಿನ ಸುತ್ತಲೂ ಇರಿಸಿರುವ ಕುರ್ಚಿಗಳಲ್ಲಿ ಕೂತುಕೊಳ್ಳಬೇಕು. ಪ್ರತಿಯೊಬ್ಬರೂ, ತಮ್ಮ ಎಡಬಲಗಳಲ್ಲಿರುವವರ ಕೈಗಳನ್ನು ಹಿಡಿಯಬೇಕು. ಮೇಜು ಶಬ್ದಮತ್ತು ಮೇಜುಚಲನ ಕ್ರಮಗಳಲ್ಲಿ ವಿವರಿಸಿದಂತೆಯೇ ಕೈಗಳನ್ನು ಹಿಡಿಯಬೇಕು ಮತ್ತು ಕೈಗಳನ್ನು ಮೊಗುಚಿಕೊಳ್ಳುವಂತೆ ಮೇಜಿನ ಮೇಲೆ ಇಡಬೇಕು. ಮುಖ್ಯವಾಗಿ ಕೈಗಳೆಲ್ಲವೂ ಒಂದು ಸರಣಿಯ ಕೊಂಡಿಗಳಂತೆ ಜೋಡಿಸಿಡಬೇಕು. ಹೀಗೆ ಮಾಡಿದ ನೇಲೆ ಸ್ವಲ್ಪಹೊತ್ತು ಎಲ್ಲರೂ ದೇವರಧ್ಯಾನಮಾಡಿ, ಸತ್ತವರಲ್ಲಿ ತಮಗೆ ಪ್ರಿಯರಾದವರನ್ನು ಮನಸ್ಸಿನಲ್ಲಿ ಕೂಗಿ ಕರೆಯಬೇಕು. ವಿಶೇಷ ಸೂಕ್ಷ್ಮಶಕ್ತಿಯುಳ್ಳವರು ಅಂದರೆ ಮಿಡಿಯಮ್ಸ್‌ಗಳು ಈ ಕ್ರಮದಲ್ಲಿ ಭಾಗವಹಿಸಿದ್ದೇ ಆದರೆ, ಬಹುಬೇಗನೆ, ಚಾವಣಿಯಿಂದ ನೇತುಹಾಕಿರುವ ತುತ್ತೂರಿಗಳಲ್ಲಿ ಒಂದು ವಿಧವಾದ ಶಬ್ದವು ಹೊರಡುವುದು. ಇದೇ ಸತ್ತವರು ಬಂದಿರುವರೆಂದೂ ಸಂಭಾಷಿಸಲು ಸಿದ್ಧರಾಗಿದ್ದಾರೆಂದೂ ಸೂಚನೆ. ಹೀಗಾಗುತ್ತಲೇ ಸಂಭಾಷಿಸಲು ಪರಲೋಕದಿಂದ ಬಂದಿರುವವರ ಹೆಸರನ್ನು ಕೇಳಿದರೆ, ಉತ್ತರವು ತುತ್ತೂರಿಗಳ ಮೂಲಕ, ಸತ್ತವರ ಧ್ವನಿಯಲ್ಲಿಯೇ ಬರುವುದು. ಯಾವ ಸತ್ತಿರುವ ಪ್ರಿಯಬಂಧುವಿನ ಧ್ವನಿಯನ್ನು ಪುನಃ ಕೇಳಲು ಕಾತುರರಾಗಿರುವೆನೋ ಆ ಧ್ವನಿಯಿಂದಲೇ ಆ ಬಂಧುವು ನನಗೆ ಉತ್ತರಗಳನ್ನು ಕೊಡುತ್ತಾನೆ. ಹಾಗೆಯೇ ಸಂಭಾಷಿಸಲು ಬಂದಿರುವ ಜೀವವು ಇಂಥವನೇ ಎಂದು ನಿರ್ಧರಿಸಲು ಕೆಲವು ಗುರುತುಗಳನ್ನು ಕೇಳಿ ತಿಳಿದುಕೊಂಡು ಆನೇಲೆ ಸಂಭಾಷಣೆಗೆ ಪ್ರಾರಂಭಿಸಬೇಕು ಮತ್ತು ನನ್ನೊಡನೆ ಸಂಭಾಷಿಸಲು ಪರಲೋಕದಿಂದ ಬಂದಿರುವವರು, ತಾವು ಆಯಾಸವುಳ್ಳವರಾಗಿರುವೆವೆಂದು ಹೇಳಿದರೆ, ಆಗಲೇ ಸಂಭಾಷಣೆಯನ್ನು ನಿಲ್ಲಿಸಬೇಕು. ಆವರನ್ನು ಅಲ್ಪ ಅಥವಾ ತುಚ್ಛವಾದ ಪ್ರಶ್ನೆಗಳಿಂದ ಸೋತಿಸಬಾರದು. ಈ ಮಾರ್ಗವನ್ನು ಬೇರೆ ಮಾರ್ಗಗಳಂತೆಯೇ ಸಾಯಂಕಾಲದಲ್ಲಿ ಕತ್ತಲೆಯಾಗುತ್ತಿರುವ ಸಮಯದಲ್ಲಿ ನಡೆಸಬೇಕು. ಈ ಮಾರ್ಗದಲ್ಲಿ ಒಂದು ವಿಶೇಷವೇನೆಂದರೆ, ಸತ್ತವರು, ಈ ಲೋಕದಲ್ಲಿ ಬದುಕಿದ್ದಾಗ ಮಾತನಾಡುತ್ತಿದ್ದ ಭಾಷೆಯಲ್ಲಿಯೇ ನಾವು ಉತ್ತರಗಳನ್ನು ಹೊಂದಬಹುದು. ಹೆಚ್ಚೇಕೆ, ಈ ಅಸಾಧಾರಣ ಮಾರ್ಗದಿಂದ ನಾವು ಸತ್ತವನನ್ನು ಕಣ್ಣಿನಿಂದ ನೋಡುವುದೊಂದು ಏನಹ, ಬಾಕಿ ಎಲ್ಲಾ ಮಾತುಕತೆಗಳನ್ನೂ ಆಡಬಹುದ. ಈಗ ನಮ್ಮ ಸ್ನೇಹಿತನು, ಒಂದು ತೆರೆಯ ಹಿಂದೆ ನಿಂತು ನಮ್ಮ ಕಣ್ಣಿಗೆ ಕಾಣದೆ. ನಮ್ಮೊಡನೆ ಮಾತನಾಡಿದರೆ ಹೇಗಿರುವುದೋ ಅವೇ ರೀತಿಯಲ್ಲಿ ನಾವು ಈ ಸ್ವಶ್ಚವಾಣಿ ಮಾರ್ಗದಿಂದ ಸತ್ತವರೊಡನೆ ಸಂಭಾಷಿಸಬಹುದು.

[ಮುಂದುವರಿಯುವುದು.

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯುಂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯುು ಇರಲೇಬೇಕು. ಮಾನವನಿಗೆ ಅದೊಂದು ಜೀವನದ ಶಕ್ತವಾದ ಶಕ್ತಿಯುು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ — ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಆವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ "ಶಕ್ತಿಸುಧೆ"ಯನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕ್ರಾಯಕರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಸಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ. ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೀರ್ಘಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ

ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ.

ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.

ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0

(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರಾಂದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಬಲಶುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸಹಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳ ಪಾಠಗಳನ್ನು ಜೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅವ್ಯರ್ಥಪ್ರಯತ್ನವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ವಿ. ಪಿ ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ—ಶಕ್ತಿಸುಧಾ ಕಾರ್ಯಾಲಯ, ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

ವನಿತಾಲೋಕ.

ತಾವು ಕಳಿದುಕೊಂಡ ಹಕ್ಕುಗಳನ್ನು ಪುನಃ ಸಂಪಾದಿಸುತ್ತಿರುವರು ಇಂದಿನ ಸ್ತ್ರೀಯರು. ಗೃಹ ವಿಷಯುಗಳೆಲ್ಲವನ್ನೂ ನೋಡಿಕೊಳ್ಳುವುದಕ್ಕಾಗಿ ಸ್ತ್ರೀಗೆ ಸಂಬಳವನ್ನು ಕೊಡಬೇಕಾದುದೇ. ಸಾಂಘಿಕವಾಗಿ, ನ್ಯಾಯಶಾಸ್ತ್ರ ರೀತಿಯಾಗಿ ಅನೇಕ ದುರ್ಭರ ಕಷ್ಟಗಳಿಗೆ ಒಳಗಾಗಿರುವ ಇಂದಿನ ಹಿಂದೂ ಸ್ತ್ರೀಯರಿಗೆ ಮುಖ್ಯವಾಗಿ ಇಂತಹ ಸದುಪಾಯವಿರುವಿಕೆಯು ಬಹಳ ಮುಖ್ಯವು.

ಇಂದಿನ ಪ್ರಪಂಚದಲ್ಲಿ ಅನೇಕ ಮಂದಿ ಭಾರ್ಯೆಯರ, ತಾಯಿಯರು ಒಂದು ಬಿಡಿಕಾಸು ಆಸ್ತಿಯೂ ಇಲ್ಲದವರ, ಒಂದು ಕವಡೆಯ ಸಂಬಳವೂ ಇಲ್ಲದಿರುವ ನೌಕರರು; ಮಕ್ಕಳನ್ನು ಹೆತ್ತು ಪೋಷಿಸುವದು ಅವರ ವಿಧಿ. ಇನ್ನೂ ಅಡಿಗೆಯವರಾಗಿಯೂ, ಕೆಲಸಗಾರಂತಾಗಿಯೂ, ಒಟ್ಟಿಗೆಳನ್ನು ಬಗೆಯುವರಾಗಿಯೂ ಇನ್ನೂ ಏಷ್ಟೋ ಏಷ್ಟೋ!

ವಿದ್ಯ ತರಗೆತಿಯು ಕುಟುಂಬಗಳಲ್ಲಿ ಗೃಹಣಿಯು ಛಾರ್ಟರ್ಡ್ ಆಫ್ ಯಕ್ಸಚೆಕ್ಕರ್. ಜಾತೀಯ ಜೀವನದಲ್ಲಿ ಸಂಬಳ ಭತ್ಯೆಗಳಿಲ್ಲದ ಗುಲಾಮರು. ಪ್ರತಿ ಪದಾರ್ಥದ ಬೆಲೆಯು ಅವರಿಗೆ ತಿಳಿದಿರುತ್ತದೆ. ಅದಕ್ಕಾಗಿಯೇ ಅವರು ತಮ್ಮ ಗಂಡಂದಿರನ್ನು ಸಾಲಗಾರರಾಗದಂತೆ ನೋಡಿಕೊಳ್ಳುತ್ತಾರೆ.

ಸ್ತ್ರೀಯರ ವ್ಯಾಪಾರವನ್ನು ಕಂಡರೆ ಗಂಡಸರಿಗೆ ಬುದ್ಧಿಯು ಎಲ್ಲೋ ಹೋಗುತ್ತದೆ. ಕಾಸು ಕಾಸಿಗೆ ವ್ಯಾಪಾರ ಮಾಡುವರ. ಸುಲಭವಾಗಿ ವ್ಯಾಪಾರವನ್ನು ಮುಗಿಸುರು

ಇಷ್ಟು ಕಷ್ಟಪಟ್ಟರೂ ಗೃಹನಿರ್ವಹಣೆಗಾಗಿ ಕೊಡುವ ಹಣವು ಹೆಂಗಸಿನದಲ್ಲ ಅಕ್ಕೆಗೆ ಅದರ ಮೇಲೆ ಯಾವ ಹಕ್ಕೂ ಇರುವದಿಲ್ಲ.

ಆಕೆಯ ಅಧಿಕಾರಿಯಾದ ಗಂಡನು ತನ್ನ ಇಷ್ಟದಂತೆ ಅದನ್ನು ಹೆಚ್ಚಿಸಲೂಬಹುದು, ತಗ್ಗಿಸಲು ಬಹುದು. ಬುದ್ಧಿ ಹುಟ್ಟಿದಲ್ಲಿ ಹೆಂಡರು ಮಕ್ಕಳನ್ನು ತಿಂಡಿಯಿಲ್ಲದೆ ಸಾಯಿಸುವನು.

ಕೆಲವು ಮನೆಗಳಲ್ಲಿ ಹೆಂಡತಿಯು ಭಿಕ್ಷುಕಳಂತೆ ಮನೆಯ ಖರ್ಚಿಗೆ ಹಣವನ್ನು ಕೊಡಿರೆಂದು ಪ್ರಾರ್ಥಿಸಬೇಕು. ಭಾರ್ಯತ್ವಕ್ಕೆ ಇದು ಬಹಳ ನೀಚವಾದ ಸ್ಥಿತಿ.

ಸಂಪತ್ತಿಗೂ ಸಂಸಾರಕ್ಕೂ ಸ್ತ್ರೀಸೇವೆ ಇಲ್ಲದೆ ಹೋದರೆ ಕಷ್ಟ, ರಾಷ್ಟ್ರದ ಪ್ರಾಣವು ಹೆಂಗಸು, ಸ್ತ್ರೀಯು ಇಲ್ಲದಿದ್ದಲ್ಲಿ ರಾಷ್ಟ್ರವು ಅಭಿವೃದ್ಧಿಯಾಗುವದೇ!

ಇಂತಹ ಸ್ತ್ರೀಗೆ ಹೆಂಡತಿಗೆ, ಸಂಬಳವಿಲ್ಲದಿರುವದು ಬಹಳ ಆಶ್ಚರ್ಯ ಹೆಂಡತಿಯು ಸತ್ತು ಕೆಲಸಗಾರಂತಾಗಿಳನ್ನು ಇಟ್ಟುಕೊಂಡಲ್ಲಿ ಅವಳಿಗೆ ಸಂಬಳವನ್ನು ಕೊಡಲೇಬೇಕು. ಪ್ರಪಂಚದಲ್ಲಿ ಸಂಬಳವಿಲ್ಲದೆ ಕೆಲಸ ಮಾಡುವಳು ಹೆಂಡತಿಯು ಮಾತ್ರವೇ. ಈ ದುರಾಚಾರಕ್ಕೆ ಕುಟುಂಬದಲ್ಲಿ ಪೋಷಣಾರ್ಥವಾಗಿ ಹಣವನ್ನು ಆರ್ಜಿಸುವ ಗಂಡಸೇ ಮುಖ್ಯ. ಮಕ್ಕಳನ್ನು ಹೆತ್ತು ಹೊತ್ತು ಸಲಹಿ, ಮನೆಯಲ್ಲಿ ಎಲ್ಲಾ ಕೆಲಸವನ್ನು ಮಾಡುವ ಹೆಂಡತಿಯು ಅಷ್ಟು ಮುಖ್ಯಳಲ್ಲವೆಂದು ಹೇಳುವದು ಮೂಢವಿಶ್ವಾಸಕ್ಕೆ ಕಾರಣವು

ಸಂಸಾರದ ಖರ್ಚಿಗೆ ಹಣವನ್ನಾರ್ಜಿಸುವದು ಎಷ್ಟು ಮುಖ್ಯವೋ ಗೃಹನಿರ್ವಹಣೆಯು ಕೂಡ ಅಷ್ಟು ಮುಖ್ಯವು. ಸಂಘಕ್ಕೆ ಇದು ಇಷ್ಟು ಮುಖ್ಯವಾದುದಾದರೂ ಅವಕ್ಕೆ ಇರಬೇಕಾದಷ್ಟು ಪ್ರಾಮುಖ್ಯತೆ ಇರುವದಿಲ್ಲ.

ಗಂಡಂದಿರು ಹೆಂಡಂದಿರಿಗೆ ಸಂಬಳವನ್ನು ಕೊಡಬೇಕೆಂದು ಸ್ವಪ್ನದಲ್ಲಿ ಕೂಡ ನೆನೆಯುವದಿಲ್ಲ. ನ್ಯಾಯಶಾಸ್ತ್ರ ಪ್ರಕಾರವಾಗಿ ಹೆಂಡತಿಯು ಗಂಡನ ಬಿಕ್ಷದ ಮೇಲೆ ಜೀವಿಸುತ್ತಿರುವ ಗುಲಾಮಳು. ಇದಕ್ಕಾಗಿಯೇ ಆಕೆಗೂ ಜಾರಿಯಲ್ಲಿರುವದು. ಮನೆಗೆ ಖರ್ಚಿಗಾಗಿ ಕೊಡುವ ಹಣವು ಗಂಡನದೆಂದು.

ಸಂಬಳ ಕೊಡದೆ ಹೋದಲ್ಲಿ ಕೋರ್ಟಿನಲ್ಲಿ ಕೇಸುಮಾಡಿ, ಕೆಲಸ ಮಾಡುವಳಾಗಲಿ, ಸಾಲ ಆಗಲಿ, ತಮ್ಮ ಸಂಬಳವನ್ನು ವಸೂಲ್ಮಾಡಿಕೊಳ್ಳುವರು. ಹೆಂಡತಿಗೆ ಸಂಬಳವಿಲ್ಲ. ಗಂಡಸನ್ನು ಕೊಡಬೇಕೆಂದು ನಿರ್ಬಂಧಿಸಲ್ಲಾರಳು.

ಹೆಂಡತಿಯು ಏನೆಲ್ಲಾ ಮಿಕ್ಕ ಕೆಲಸಗಾರರಿಗೆಲ್ಲರಿಗೂ ಕಾನೂನು ರಕ್ಷಣೆಯಿದೆ ಕಾಯಿಯರಿಗೆ ಟ್ರೇಡು ಯೂನಿಯನ್ಸ್ ಇಲ್ಲ. ನನ್ನದು ಅನ್ನಲು ಒಂದು ಕಾಸೂ ಇಲ್ಲದೆ ಮಕ್ಕಳನ್ನು ಹೆರುವಳಾಗಿಯೂ, ಮನೆಯಲ್ಲಿ ಕೆಲಸಮಾಡುವಳಾಗಿಯೂ ಇರಲು ಅವಕಾಶವಿದೆ, ಅಷ್ಟೇ. ಗಂಡನು ಬಳ್ಳಿಯವನಾದಲ್ಲಿ ಹೆಂಡತಿಯು ಸುಖಪಡುವಂತೆ ತನ್ನ ಆದಾಯವನ್ನನುಸರಿಸಿ ಖರ್ಚುಮಾಡುವನು; ಕೆಟ್ಟವನಾದಲ್ಲಿ ಹೆಂಡತಿಯನ್ನು ಅಳಿಸಿ, ತಿಂಡಿಕೂಡ ಕೊಡದೆ ಸಾಯಿಸುವನು. [ಸಶೇಷ.

ಲಾಕೂರಿಲ್ಲಿ ಪೋಲೀಸು ಒಂದೋಬಸ್ತು ಜೆನ್ನಾಗಿದ್ದರೂ ಜನರ ಧನ ಮಾನಗಳನ್ನು ಕಾಪಾಡುವದು ಕಷ್ಟತರವಾಗಿರುತ್ತದೆ. ಆಯುಧಪಾಣಿಗಳಾದ ಕಳ್ಳರ ಒಂದು ಗುಂಪು ಈಚೆಗೆ ಹೆಂಗಸರನ್ನು ಎತ್ತಿಕೊಂಡು ಹೋಗುತ್ತಿರುವೆಂದು ತಿಳಿಯಬಂದಿದೆ.

[ಈ ಪದ್ಯವನ್ನು ಮಂದಾರಿದುದ.]

ಮಾರುತಿ—ಹಾಡುವನು.

ರಾಮಚಂದ್ರನಂತಹ ರಾಜನಕಾಣೆ
ಜಾನಕಿದೇವಿಯಂತಹ ರಾಣಿಯುಕಾಣೆ
ರಾವಣನಾಮ ರಾಮನಾಮ
ವ್ಯಥೆಗಳಹುಸುವ ರಾವಣನಾಮ
ರಾಮನಾಮ ರಾವಣನಾಮ

ಮತ್ತೊಂದು ಗುಟ್ಟನ್ನು ಬಿಡಿಸಿಯುವನು

ಶ್ರೀರಾಮನು--ಅಪೆ ಶರೊಂದಿಗೆ ಇಳಿದು ಬಂದು

ಮಾರುತಿಯನ್ನು ಅಪ್ಪಿಕೊಂಡು

ಮಾರುತಿಯಂತಹ ದೂತನ ಕಾಣೆ
ಹನುಮನೇ ರಾಮ ರಾಮನೇ ಹನುಮ

ಜಯಜಯಧ್ವನಿ.

[ವಿಜಯದಿಂದ ಅನುವಾದ.]

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ನೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ.

H. SASSEN & CO.,
15 Armenian Street, Post Box 163
G. T. MADRAS

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ ನಿಮ್ಮ ಜಾತಕದ ಸಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ತಾಜಕ ಜ್ಯೋತಿಷ್ಯರು,
ಗಂಟಲ ಚಾಮರಾಜ ಅಗ್ರಹಾರ, ಮೈಸೂರು

Shanmukhavilas Coffee Club

Jaganmohan Palace Road
MYSORE
— for —
EXCELLENTTIFFIN, & COFFEE

Wanted

Agents with Pay and Allowances
to canvass subscribers and advertisers for

SATYAVADI

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

Weekly Newspaper

SATYAVADI

Every Wednesday

MYSORE (Founded 1917) 11—3—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಪೆಮ್ಮಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಒರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ಸೂರಕ್ಕೆ ೧೫೦ ವರೆಗೆ ಕಮಿಷನ್ ಕೊಡಲಾಗುವುದು ಹೊರ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣ ನಿಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪನ್ನಿಟ್ಟು ವಿಶೇಷ ವಿವರಗಳಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya
Dacca (Bengal)
ಸಾಧನ ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನಶಾಸ್ತ್ರ ಪಂಡಿತರಾಗಿದ್ದ ಮ॥ ಜೋಗೀಷಚಂದ್ರ ಘೋಷು ಎಂ. ಎ ಎಫ್. ಸಿ ಎಸ್. ಲಂಡನ್.

ಆಯುರ್ವೇದ-ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಫಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ ಸರ್ವ ವಿಶ್ವವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಕ್ಕೆ ೪ ರೂಪಾಯೆ.

ಸರೀಬಾದಿಸರ್ಪ—ಪ್ರಮೇಹ, ಸವಾಯಿ ರೋಗಗಳಿಗೆ ಅವೋಘ ಔಷಧವಾದ ರಸ ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧದ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜಿಕನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮತ್ತು ೪೦ ಹೊತ್ತಿಗೆ ೫ ರೂ.

H. S- KAMAL SHERIFF, DENTIST
Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy
Geueral Hospital Road
MYSORE
f0r
Best Unani Medicines